ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಸಭೆ ಇವತ್ತು ಪ್ರಾರಂಭವಾಗುತ್ತಿದೆ. ಕೊನೆಯ ಪಕ್ಷ ತಾವು ಈಗ ಏನು ಹೇಳುತ್ತಿದ್ದೀರಿ. ಆ ಕಾಗದ ಪತ್ರಗಳನ್ನು ತೋರಿಸಿ ಸ್ವಾಮಿ

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ :- ಎಲ್ಲಾ ನೀವೇ ಹೇಳಿದರೆ ಮಾನ್ಯ ಮಂತ್ರಿಗಳು ಹೇಳುವುದು ಏನು?

ಶ್ರೀ ಎಸ್. ಸುರೇಶ್ ಕುಮಾರ್ :- ನಾನು ಅವರ ಪರವಾಗಿ ಮಂಡಿಸುತ್ತಿದ್ದೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ :- ನೀವು ಏನು ಮಾಡುತ್ತಿದ್ದೀರಿ. ಬೇರೆಯವರ ಇನ್‌ಚಾರ್ಜ್ ನೀವು ಏಕೆ ತೆಗೆದುಕೊಳ್ಳುತ್ತಿದ್ದೀರಿ?

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಆರ್. ಅಶೋಕ್ :- ಅವರು ನಮಗೆ ಹೇಳುವುದು ಬೇಡ. ಅವರು ಸೀಟ್ ಎಲ್ಲಿದೆಯೆಂದು ಎಂದು ಅವರು ಒಂದು ಸಲ ಹಿಂದೆ ತಿರುಗಿ ನೋಡಿಕೊಂಡು ಬಿಡಲಿ. ನಮ್ಮದು ತೋರಿಸುವುದಕ್ಕೆ ಮುಂಚೆ ಅವರದು ಹೇಗೆ ಇದೆ ಎಂದು ನೋಡಿಕೊಳ್ಳಲಿ.

ಅಧ್ಯಕ್ಷರು :- ಹೇಳಿಕೆಗಳು ಅಲ್ಲ. ಈಗ ಮುಂದುವರೆದು ಕಾಗದ ಪತ್ರಗಳನ್ನು ಮಂಡಿಸುವುದು. ಮಾನ್ಯ ಹಾಲಪ್ಪನವರೆ ತಾವು ಮಂಡಿಸಿ.

ಅಧ್ಯಕ್ಷರು :- ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಒಂದು ಅಧಿಸೂಚನೆಯನ್ನು ಮಂಡಿಸುವುದು.

ಶ್ರೀ ಬಿ.ಎಸ್. ಯಡಿಯೂರಪ್ಪನವರು (ಮುಖ್ಯಮಂತ್ರಿಗಳು) :- ವಿಧಾನಸಭೆಯ ಕ್ಷೇತ್ರ ಪುನರ್ ವಿಂಗಡಣೆಗೆ ಸಂಬಂಧಿಸಿದಂತೆ ದಿನಾಂಕ 21-10-2008ರ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತು.

ಕರ್ನಾಟಕ ರಾಜ್ಯಪತ್ರ
ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ಪತ್ರಿಕೆ
ಭಾಗ - IV ಬೆಂಗಳೂರು, ಮಂಗಳವಾರ, ಅಕ್ಟೋಬರ್ 21, 2008
(ಆಶ್ವಯುಜ 29, ಶಕ ವರ್ಷ 1920) ನಂ. 1149

ELECTION COMMISSION OF INDIA

Nirvachan Sadan, Ashoka Road, New Delhi-110 001

Dated – 21st October 2008
29 Asvina 1930 (Saka)

NOTIFICATION

No. 282/KT/2008 Whereas the Chief Electoral Officer, Karnataka has intimated a few mistakes that have occurred due to inadvertent slip of omission in the description of certain Assembly and Parliamentary Constituencies mentioned in Table A and B of the Delimitation Commission's Order No. 49 published on 2nd July 2007 read with Order No. 56 publication on 26th March, 2008 in respect of the State of Karnataka.

And whereas the Commission considers it necessary and expedient to make necessary corrections in the description of the extent of those constituencies as to correct the errors arising from inadvertent slip or omission and to bring the Order correct and update.

Now, therefore, in exercise of the powers conferred by Section 11 of the Delimitation Act, 2002 the Election Commission hereby makes the corrections in said Order No. 49 read with Order No. 56 relating to this State of Karnataka as Follows :-

TABLE – A
ASSEMBLY CONSTITUENCIES

Sl No	Name of the District	No. & Name of the Assembly Constituency	Extent as per final Notification	Correct version of the spelling of Assembly Constituency	Correct version of the spelling and names of Taluk, Circle and Village to read as
1	2	3	4	5	6
1	Bagalkot Dist.	22-Bilgi	2-Bilgi Taluk 5- Bagalkot Taluk (Part) 2- Kaladagi & 3- Kerur Circle		2- Bilgi Taluk 4- Badami Taluk (Part) 3- Kerur Circle 5- Bagalkot Taluk (Part) 2 Kaladagi Circle
2		24- Bagalkot	4- Badami Taluk (Part) 5- Baglakot Taluk (Part)		5- Baglakot Taluk (Part)
3	Gulbarga	35- Jevargi	7- Jevargi Taluk	25- Jevargi Taluk	7- Jevargi Taluk
4		38- Yadgir	9- Shahpur Taluk(Part)		9- Shahpur Taluk(Part)
5		43-Gulbarga Rural (SC)	..... Darayapur(D)...Nandoor (B) Nadoor (K)... Marthur GP Tonasinahalli GP- Tonasinahalli		Darayapur(D)...Nandoor (B) Nadoor (K)... Marthur GP Tonasinahalli GP- Tonasinahalli
6		44-Gulbarga Dakshina	..... Bhimanahalla GP ..... Khandal GP		Bhimanahalla GP ..... Khandal GP
7	Raichur	57- Lingasugur	Honakunte		Honukunti
8	Gadag	66- Gadag	..... Mulgund TMC		..... Mulgund TP .....
9		67- Ron	Gajendragarah TMC after 1- Ron Circle Rin and Naregal TPs		2- Naregal Circle(Part) Gajendragad TMC after Veerpur Ron TMC after Ron Circle and Naregal TP after Gajendragad TMC
10	Shimoga	113- Shimoga	..... Shimoga CMC (Part) Shimoga CMC Ward Nos. 1 to 4 , 5 to 12 and 16 to 35		..... Shimoga CMC (Part) Shimoga CMC Ward Nos. 1 to 4 , 5 to 12 and 16 to 35
11	Tumkur	128- Chiknayakanahalli	128- Chiknayakanahalli	128- Chiknayakanahalli	1. Chiknayakanahalli Taluk
12		130 – Turuvekere	Kalur GP Bill Nanadi Peddanahalli GP Kadabagaddekaval		Kalur GP Bill Nanadi Peddanahalli GP Kadabagadde Kaval (B)
13		135 – Gubbi	Gubbi Taluk (Part) ..... Kadaba Circle (Part) ..... Marashettyhalli GP Haragaladev gudda Kaval		 Marashettyhalli GP Haragaladev gudda Kaval

14		Bnagalore Rural	180- Dodda ballapur	2- Madure	2- Madure
15	Mandya	188-Melukote	8- Duda Circle II (Part) Gunayakanahalli Shivalli Beeregowdanahalli Chanagalu		Gunayakanahalli Shivalli Beeregowdanahalli Chanagalu
16		190-Shrirangapattana	190-Shrirangapattana		190-Shrirangapattana

TABLE – B

Sl No	No. & Name of the Assembly Constituency	Extent as per final Notification	Correct version of the spelling and names of Taluk, Circle and Village to read as
1	2	3	4
1	5-Gulbarga	35-Jewargi 40-Chitapur (SC)	35-Jewargi 40-Chitapur (SC
2	6-Raichur	37-Shahpur	37-Shahpur
3	27-Chikkaballapur	180- Dodda Ballapur	180- Dodda Ballapur
4	19- Tumkur	128- Chiknayakan-halli	128- Chiknayakan-halli
5	20- Mandya	190 Shrirangapattana	190 Shrirangapattana

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

ವಿಷಯ : ಲಾತೂರಿನ ರಾಜೀವ್‌ಗಾಂಧಿ ಸರ್ಕಲ್ ಬಳಿ ಛಾವಾ ಸಂಘಟನೆ ಅಧ್ಯಕ್ಷರಾದ ಶ್ರೀ ಅಣ್ಣಾಸಾಹೇಬ ಚಾವಡೆಯವರ ನೇತೃತ್ವದಲ್ಲಿ ಬಸ್ಸನ್ನು ತಡೆದು ನಿಲ್ಲಿಸಿ ಬೆಂಕಿ ಹಚ್ಚಿರುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :- ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿಯನ್ನು ಕೋರಿ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇದು ರಾಜ್ಯದಲ್ಲಿ ನಡೆದಿರತಕ್ಕಂಥ ಘಟನೆ ಅಲ್ಲ. ನಿನ್ನೆ ಲಾತೂರಿನ ರಾಜೀವ್‌ಗಾಂಧಿ ಸರ್ಕಲ್ ಬಳಿ ಛಾವಾ ಸಂಘಟನೆ ಅಧ್ಯಕ್ಷರಾದ ಅಣ್ಣಾಸಾಹೇಬ ಚಾವಡೆ ಅವರ ನೇತ್ರತ್ವದಲ್ಲಿ ಒಂದು ಬಸ್ಸನ್ನು ತಡೆದು ನಿಲ್ಲಿಸಿ ಬೆಂಕಿಯನ್ನು ಹಚ್ಚಿರುವ ಘಟನೆ ನಡೆದಿದೆ. ಬಹುಶಃ ವಿಧಾನಸಭೆ ಬೆಳಗಾವಿಯಲ್ಲಿ ನಡೆಯುತ್ತಿರಬೇಕಾದ ಈ ಸಂದರ್ಭದಲ್ಲಿ ಬೆಳಗಾವಿಯಲ್ಲಿ ಕೂಡ ಮರಾಠಿಗರು ಹೆಚ್ಚಿನ ಸಂಖ್ಯೆಯಲ್ಲಿ ವಾಸ ಮಾಡುತ್ತಿದ್ದಾರೆ. ವಿಧಾನಸಭೆ ನಡೆಯಬೇಕಾದ ಸಮಯದಲ್ಲಿ ಮರಾಠಾ ಮಹಾಮೇಳಕ್ಕೆ ಅನುಮತಿಯನ್ನು ನಿರಾಕರಿಸಿದರು ಎನ್ನುವ ಒಂದು ಕಾರಣಕ್ಕೋಸ್ಕರ ಮತ್ತು ಪೊಲೀಸ್